ಮೈಸೂರು ಎಂದ ತಕ್ಷಣ ನಮಗೆ ನೆನಪಿಗೆ ಬರುವುದು ಯದುವಂಶದ ಅರಸರ ಸಾಹಸಗಳು. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಸಾಮಾಜಿಕ ಚಟುವಟಿಕೆಗಳು. ಇನ್ನೂ ಕೆಲವು ಒಡೆಯರ್ ಅವರ ಸಾಂಸ್ಕೃತಿಕ ಕೊಡುಗೆಗಳು. ದಿವಾನರ ಹೊಸ ಹೊಸ ಆಲೋಚನೆಗಳು. ವಿಶ್ವೇಶ್ವರಯ್ಯ ಅವರ ಎಂಜಿನಿಯರಿಂಗ್ ಸಾಧನೆಗಳು. ಆದರೆ ಮೈಸೂರು ಯದುವಂಶದಲ್ಲಿ ಕೆಲವು ರಾಜಮಾತೆಯರು ಅಪರೂಪದ ಸಾಧನೆ ಮಾಡಿ ಹೋಗಿದ್ದಾರೆ. ಹಲವಾರು ಪ್ರಥಮಗಳಿಗೆ ಸಾಕ್ಷಿಯಾಗಿದ್ದಾರೆ. ಎಲ್ಲಕ್ಕಿಂತ ಮುಖ್ಯವಾಗಿ ಮೈಸೂರು ಸಂಸ್ಥಾನವನ್ನು ನಮಗೆ ಉಳಿಸಿಕೊಟ್ಟಿದ್ದಾರೆ.

ರಾಜಮಾತೆಯರ ಇತಿಹಾಸ ಆರಂಭವಾಗುವುದು ಕ್ರಿ.ಶ. 1732ರಿಂದ. ಮೈಸೂರು ರಾಜ್ಯದ ಆಡಳಿತದ ಅವಿಭಾಜ್ಯ ಅಂಗವಾಗಿದ್ದ ದಳವಾಯಿಗಳು ಬಹುತೇಕ ಬಾರಿ ತಮ್ಮ ಲಕ್ಷ್ಮಣರೇಖೆಯನ್ನು ದಾಟುತ್ತಿದ್ದರು. ಸೇನೆಯ ಮೇಲೆ ಹಿಡಿತ ಸಾಧಿಸುತ್ತಿದ್ದ ಅವರು, ಮಹಾರಾಜರೂ ತಮ್ಮ ಅಂಕೆಯಲ್ಲಿಯೇ ಇರಬೇಕು ಎಂದು ಬಯಸುತ್ತಿದ್ದರು. ಸುಮಾರು 18 ವರ್ಷ ಆಡಳಿತ ನಡೆಸಿದ ದೊಡ್ಡ ಕೃಷ್ಣರಾಜ ಒಡೆಯರ್ ಅವರಿಗೂ ದಳವಾಯಿಗಳ ಕಾಟ ವಿಪರೀತವಾಗಿತ್ತು. ಅವರ ಮೇಲೆ ನಿಯಂತ್ರಣ ಸಾಧಿಸಲು ಸಾಧ್ಯವಾಗದೇ 1732ರಲ್ಲಿ ಅವರು ನಿಧನರಾದರು. ಆಗ ರಾಜ್ಯದ ಎಲ್ಲ ಜವಾಬ್ದಾರಿ ಅವರ ಪತ್ನಿ ದೇವಾಜಮ್ಮಣ್ಣಿ ಅವರ ಮೇಲೆ ಬಿತ್ತು. ಪುತ್ರ ಸಂತಾನವಿಲ್ಲದ ಅವರು ತಮ್ಮ ಸಮೀಪದ ಸಂಬಂಧಿ ಅಂಕನಹಳ್ಳಿ ಚಾಮರಾಜ ಒಡೆಯರ್ ಅವರನ್ನು ದತ್ತು ಪಡೆದು ಮಹಾರಾಜನನ್ನಾಗಿ ಮಾಡಲು ಬಯಸಿದರು. ಆದರೆ ಅದಕ್ಕೆ ದಳವಾಯಿಗಳು ತೀವ್ರ ವಿರೋಧ ವ್ಯಕ್ತಪಡಿಸಿದರು.

ತಮ್ಮ ಇಷ್ಟಕ್ಕೆ ವಿರುದ್ಧವಾಗಿ ಚಾಮರಾಜ ಒಡೆಯರ್ ಅವರು ಸಿಂಹಾಸನದ ಮೇಲೆ ಕುಳಿತಿದ್ದನ್ನು ವಿರೋಧಿಸಿದ ದಳವಾಯಿಗಳು ಹೇಗಾದರೂ ಮಾಡಿ ಅವರನ್ನು ತಮ್ಮ ಕೈಗೊಂಬೆ ಮಾಡಿಕೊಳ್ಳಬೇಕು ಎಂದು ಪ್ರಯತ್ನಿಸಿದರು. ಇಂತಹ ಪ್ರಯತ್ನಗಳಿಗೆ ರಾಜಮಾತೆ ದೇವಾಜಮ್ಮಣ್ಣಿ ಮತ್ತು ಚಾಮರಾಜ ಒಡೆಯರ್ ಇಬ್ಬರೂ ಸೊಪ್ಪು ಹಾಕಲಿಲ್ಲ. ಇದರಿಂದ ಕುಪಿತರಾದ ದಳವಾಯಿಗಳು ಕುತಂತ್ರ ನಡೆಸಿ ಚಾಮರಾಜ ಒಡೆಯರ್ ಅವರನ್ನು ಬಂಧಿಸಿ ಕಬ್ಬಾಳು ದುರ್ಗದಲ್ಲಿ ಬಂಧಿಸಿಟ್ಟರು.

ದೇವಾಜಮ್ಮಣ್ಣಿ ಇದಕ್ಕೆ ಮಣಿಯಲಿಲ್ಲ. ದಳವಾಯಿಗಳ ದುರಾಕ್ರಮಣವನ್ನು ಎದುರಿಸಿದ ಅವರು ಅರಸು ಸಂಪ್ರದಾಯದ ಇಮ್ಮಡಿ ಕೃಷ್ಣರಾಜ ಒಡೆಯರ್ ಅವರನ್ನು ದತ್ತು ಪಡೆದು ಅವರಿಗೆ ಪಟ್ಟಕಟ್ಟಿದರು. ಆಗ ದಳವಾಯಿಗಳಾಗಿದ್ದವರು ಕಳಲೆ ನಂಜರಾಜಯ್ಯ ಮತ್ತು ದೇವರಾಜಯ್ಯ. ಆ ಇಬ್ಬರೂ ತಮ್ಮ ಕುತಂತ್ರವನ್ನು ಬಿಡಲಿಲ್ಲ. ರಾಜರನ್ನು ಹದ್ದುಬಸ್ತಿನಲ್ಲಿಡುವ ಪ್ರಯತ್ನವನ್ನು ಮುಂದುವರಿಸಿದರು. ರಾಜ್ಯದ ಸೇನೆಯಲ್ಲಿ ಮಹಾರಾಜರಿಗೆ ನಿಷ್ಠರಾಗಿರುವ ಮತ್ತು ಪ್ರಜಾ ಪ್ರೀತಿಯನ್ನು ಹೊಂದಿರುವ ಜನರನ್ನು ಗುರುತಿಸಿ ಬೆಳೆಸಿದ ದೇವಾಜಮ್ಮಣ್ಣಿ, ದಳವಾಯಿಗಳನ್ನು ನಿಯಂತ್ರಿಸಲು ಪ್ರಯತ್ನಿಸಿದರು. ಇದು ಕೊಂಚಮಟ್ಟಿಗೆ ಫಲಕೊಟ್ಟಿತು. ಆದರೆ ರಾಜಮಾತೆಯ ಪ್ರಯತ್ನ ಬಹಳ ದಿನ ನಡೆಯಲಿಲ್ಲ. ತಮ್ಮ ವಿರುದ್ಧ ದಂಗೆ ಎದ್ದ ಸೈನಿಕರು ಹಾಗೂ ಪ್ರಜೆಗಳನ್ನು ಬಂಧಿಸಿದ ದಳವಾಯಿಗಳು, ಅವರ ಕಿವಿ ಮತ್ತು ಮೂಗುಗಳನ್ನು ಮಹಾರಾಜ ಇಮ್ಮಡಿ ಕೃಷ್ಣರಾಜ ಒಡೆಯರ್ ಎದುರೇ ಕತ್ತರಿಸಿ ಹಾಕಿದರು. ಈ ಕ್ರೌರ್ಯ ಪ್ರಜೆಗಳಲ್ಲಿ ಇನ್ನಷ್ಟು ಸಿಟ್ಟನ್ನು ತರಿಸಿತು. ದಳವಾಯಿಗಳ ವಿರುದ್ಧದ ಹೋರಾಟ ಇನ್ನೂ ಹೆಚ್ಚಾಯಿತು. ಆಗ ದಳವಾಯಿಗಳು ಸೇನೆಯಲ್ಲಿಯೇ ಇರುವ ಅತ್ಯಂತ ಚುರುಕಾಗಿದ್ದ ಹೈದರಾಲಿ ಎಂಬ ಯುವಕನಿಗೆ ಬಂಡೆದ್ದ ಪ್ರಜೆಗಳನ್ನು ಹತ್ತಿಕ್ಕುವ ಜವಾಬ್ದಾರಿ ವಹಿಸಿದರು.

ಹೈದರಾಲಿ ತನಗೆ ದೊರೆತ ಅವಕಾಶವನ್ನು ಚೆನ್ನಾಗಿ ಬಳಸಿಕೊಂಡು ದಳವಾಯಿಗಳ ಮೇಲೆ ಮತ್ತು ಮೈಸೂರು ರಾಜ್ಯದ ಮೇಲೆ ಹಿಡಿತ ಸಾಧಿಸಿದ. ಅಲ್ಲಿಂದಲೇ ಹೈದರಾಲಿ ಮತ್ತು ಟಿಪ್ಪು ಸುಲ್ತಾನ್ ಪರ್ವ ಆರಂಭವಾಯಿತು. ದಳವಾಯಿಗಳ ವಿರುದ್ಧ ಹೋರಾಟ ನಡೆಸುತ್ತಲೇ ದೇವಾಜಮ್ಮಣ್ಣಿ ನಿಧನರಾದರು. ಕೆಲವೇ ದಿನಗಳಲ್ಲಿ ತಮ್ಮ 26ನೇ ವಯಸ್ಸಿನಲ್ಲಿಯೇ ಮಹಾರಾಜ ಇಮ್ಮಡಿ ಕೃಷ್ಣರಾಜ ಒಡೆಯರ್ ಕೂಡ ನಿಧನರಾದರು. ಮತ್ತೆ ಮೈಸೂರು ಸಂಸ್ಥಾನ ಬಿಕ್ಕಟ್ಟಿನಲ್ಲಿ ಸಿಲುಕಿತು.

ಆಗ ರಾಜ್ಯವನ್ನು ಸುಸ್ಥಿತಿಗೆ ತರುವ ಜವಾಬ್ದಾರಿ



ಕೃಷ್ಣರಾಜಮ್ಮಣ್ಣಿ ಮತ್ತು ಮಕ್ಕಳು